

ಸ್ಕಿಲ್ ಗೋಲ್ಡನ್ ಬಾರ್ಡರ್ , ಕುಂದನ್ ವರ್ಕ್ ಹಾಗೂ ಆನೆಯ ವಿನ್ಯಾಸವಿರುವ ಲೆಹಂಗಾಗಳು ಚಿಕ್ಕಮಕ್ಕಳಿಗೆ ಹೇಳಿಮಾಡಿಸಿದಂತಿವೆ.. ಹಾಗೇ ಕಟ್ ವರ್ಕ್ ಇರುವ ಫ್ಲೋರಲ್ ಬಾರ್ಡರ್ ಹೊಂದಿರುವ ಪೋಲ್ಕ ಡಾಟ್ಸ್ ಇರುವ ನೆಟ್ಟೆಡ್ ಲೆಹಂಗಾ ಇದಕ್ಕೆ ಸ್ಲಿವ್‌ಲೆಸ್ ಹಾಗೂ ಜರ್ದೋಸಿ ವರ್ಕ್ ಇರುವ ಬ್ಲೌಸ್ ಹಾಕುವುದರಿಂದ ಮಕ್ಕಳು ಮುದ್ದಾಗಿ ಕಾಣುತ್ತಾರೆ. ಥ್ರೆಡ್ ವರ್ಕ್ ಹಾಗೂ ಜರಿ ಪ್ರಿಟೆಂಡ್ ಇರುವ ಬ್ರೊಕೇಡ್ ಸಿಲ್ಕ್ ಲೆಹಂಗಾ, ಜರ್ದೋಸಿ ವರ್ಕ್ ಇರುವ ಬ್ಲೌಸ್‌ಗಳು ಮಾರುಕಟ್ಟೆಯಲ್ಲಿವೆ.

## ಲೆಹಂಗಾ ಇತಿಹಾಸ

ಲೆಹಂಗಾ ಚೋಲಿ ಇದೊಂದು ಸಾಂಪ್ರದಾಯಿಕ ಉಡುಪು. ಇದು ಹೆಚ್ಚಾಗಿ ಗುಜರಾತ್, ಮಧ್ಯಪ್ರದೇಶ, ಉತ್ತರಪ್ರದೇಶ, ಬಿಹಾರ್, ಹರಿಯಾಣ ಹಿಂದಿ ಮಾತನಾಡುವ ಪ್ರದೇಶಗಳಲ್ಲಿ ಇದನ್ನು ಹೆಚ್ಚಾಗಿ ಕಾಣಬಹುದು. ಚೋಲಿ. ಲೆಹಂಗಾ ಉದ್ದನೆಯ ಲಂಗ– ಇದರಲ್ಲಿ ಕಸೂತಿ ವರ್ಕ್, ಹಾಗೂ ಮಿರರ್ ವರ್ಕ್‌ಗಳನ್ನು ಹೆಚ್ಚಾಗಿ ಕಾಣಬಹುದು. ಸಿಲ್ಕ್, ಹತ್ತಿ, ಬ್ರೊಕೇಡ್, ಶಿಫಾನ್ ವಿವಿಧ ರೀತಿಯ ಬಟ್ಟೆಗಳನ್ನು ಉಪಯೋಗಿಸಿ ಇದನ್ನು ವಿನ್ಯಾಸ ಮಾಡಲಾಗುತ್ತದೆ. ಹಾಗೇ ಇದರ ಮೇಲೆ ಕುಂದನ್ ವರ್ಕ್, ಕಸೂತಿ, ಜರ್ದೋಸಿ, ಪುಲ್ಕರಿ ವಿನ್ಯಾಸಗಳನ್ನು ಕಾಣಬಹುದು. ಇದನ್ನು ಸಾಮಾನ್ಯವಾಗಿ ಉತ್ತರ ಭಾರತದಲ್ಲಿ ವಧುವಿನ ಉಡುಪಾಗಿ ಧರಿಸಿದರೆ, ಗುಜರಾತಿನ ವಿಶೇಷ ಹಬ್ಬವಾದ ಗರ್ಬಾದ ಸಾಂಪ್ರದಾಯಿಕ ಉಡುಗೆಯಾಗಿದೆ.

ಲೆಹಂಗಾ ಚೋಲಿಗಳಂತೆ ಹಾಫ್ ಸೀರೆ ಕೂಡ ಹಬ್ಬದ ಋತುವಿನಲ್ಲಿ ಈಗ ಟ್ರೆಂಡಿಯಾಗಿದೆ. ಮನೆಯಲ್ಲಿನ ಸಣ್ಣ ಹೆಣ್ಣುಮಕ್ಕಳಿಗೆ ತಮ್ಮ ತಾಯಿಯಂತೆ ತಾನು ಸೀರೆ ಉಡಬೇಕು ಎಂಬ ಆಸೆ ಇರುತ್ತದೆ. ಹೆಣ್ಣುಮಕ್ಕಳ ಈ ಆಸೆಗೆ ಇಂಬು ನೀಡುವಂತೆ ಈಗ ತರತರಹದ, ಹೊಸ ಹೊಸ ವಿನ್ಯಾಸದ ಹಾಫ್ ಸೀರೆಗಳು ಮಾರುಕಟ್ಟೆಯಲ್ಲಿವೆ. ಇದನ್ನು ನೋಡುವುದಕ್ಕೆ ಸಿಂಪಲ್ ಎನಿಸಿದರೂ ಮಿಕ್ಸ್ ಅಂಡ್ ಮ್ಯಾಚ್ ಶೈಲಿಯ ಹಾಫ್ ಸೀರೆಯನ್ನು ಹೆಣ್ಣುಮಗುವೊಂದು ತೊಟ್ಟು ಓಡಾಡುತ್ತಿದ್ದರೆ ಎಲ್ಲರ ಕಣ್ಣು ಅದರ ಮೇಲೆಯೇ ಬೀಳುತ್ತದೆ.ಹಾಗೇ ಇದಕ್ಕೆ ಕಾಂಟ್ರಾಸ್ಟ್ ದುಪಟ್ಟಾಗಳನ್ನು ಬಳಸುವುದರಿಂದ ಮತ್ತಷ್ಟೂ ಮೆರಗು ನೀಡುತ್ತದೆ. ಹೂವಿನ ವಿನ್ಯಾಸವಿರುವ ಲಂಗ, ಫ್ಲೈನ್ ಲಂಗ, ಸ್ಟೋನ್ ವರ್ಕ್ ಇರುವ ಪಲ್ಲು, ಎ ಲೈನ್ ಹಾಫ್ ಸೀರೆಗಳು ಕೂಡ ಎಲ್ಲರ ಕಣ್ಣು ಸೆಳೆಯುತ್ತದೆ. ಮೂಲತಃ ಈ ಹಾಫ್ ಸೀರೆಯನ್ನು ಸಿಲ್ಕ್ ಹಾಗೂ ಕಾಟನ್ ಬಟ್ಟೆ ಬಳಸಿಕೊಂಡು ತಯಾರಿಸಲಾಗುತ್ತಿತ್ತು. ಈಗ ಬೇಡಿಕೆ ಹಾಗೂ ಜನರ ಅಭಿರುಚಿಗನುಗುಣವಾಗಿ ಶಿಫಾನ್, ಕ್ರೇಪ್, ಜಾರ್ಜೆಟ್ ಹಾಗೂ ನೈಲಾನ್‌ನಲ್ಲೂ ಲಭ್ಯವಿದೆ.

## ಹಾಫ್ ಸೀರೆ

ಇಂಗ್ಲಿಷ್ ನಲ್ಲಿ ಹಾಫ್ ಸೀರೆ ಎಂದು ಕರೆಯುವ ಇದನ್ನು ಅಪ್ಪಟ ಕನ್ನಡದಲ್ಲಿ ಲಂಗ ದಾವಣಿ ಎಂದು ಕರೆಯುತ್ತಾರೆ. ಹೆಣ್ಣುಮಗುವೊಂದು ಬಾಲ್ಯಾವಸ್ಥೆ ದಾಟಿ ಯೌವನಾವಸ್ಥೆಗೆ ಬಂದಾಗ ಹೆಣ್ಣುಮಕ್ಕಳು ಧರಿಸುವ ಉಡುಪಾಗಿದೆ. ಈ ಮೂಲಕ ಮನೆಯ ಹೆಣ್ಣುಮಗಳು ಮದುವೆಗೆ ತಯಾರಾಗಿದ್ದಾಳೆ ಎಂಬುದನ್ನು ಈ ಉಡುಪು ಸೂಚಿಸುತ್ತದೆ. ಕೆಲವು ಕಡೆ ಹೆಣ್ಣುಮಗುವಿನ ಅಜ್ಜಿಅಜ್ಜಂದಿರು ತಮ್ಮ ಮೊಮ್ಮಗುವಿಗೆ ಇದನ್ನು ಉಡುಗೊರೆ ರೂಪದಲ್ಲಿ ನೀಡುತ್ತಾರೆ. ಹೆಣ್ಣುಮಗುವಿನ ನಾಮಕರಣ ಸಂದರ್ಭದಲ್ಲೂ ಇದನ್ನು ಅಜ್ಜಿ ತಾತ ಉಡುಗೊರೆಯಾಗಿ ನೀಡುವ ಪದ್ಧತಿಯೂ ಇದೆಯಂತೆ. ಹಾಗಂತ ಇದು ದಕ್ಷಿಣ ಭಾಗದ ಎಲ್ಲಾ ಕಡೆ ಈ ಪದ್ಧತಿಯ ಆಚರಣೆ ಇಲ್ಲ. ಕೆಲವು ಕಡೆ ಮಾತ್ರ ಈ ಆಚರಣೆ ಇದೆಯಂತೆ.

## ಆಭರಣಗಳ ಹಂಗಿಲ್ಲ!

ತುಂಬಾ ಡಿಸೈನ್ ವರ್ಕ್ , ಸ್ಟೋನ್ ವರ್ಕ್ ಇರುವ ಲೆಹಂಗಾ ಧರಿಸಿದಾಗ ಆದಷ್ಟು ಕಡಿಮೆ ಆಭರಣಗಳನ್ನು ಧರಿಸಿ. ವಿನ್ಯಾಸ ಕಡಿಮೆ ಇರುವ ಲೆಹಂಗಾ ಧರಿಸಿದರೆ ಕುಂದನ್, ಪೋಲ್ಕಾ, ಮೀನಾಕರಿ ಆಭರಣಗಳು ಹೆಚ್ಚು ಹೊಂದುತ್ತದೆ. ನಿಮ್ಮ ಮುಖ ಹಾಗೂ ಡ್ರೆಸ್ ಗೆ ಹೊಂದಿಕೆಯಾಗುವ ಮೇಕಪ್ ಹಾಗೂ ಕೇಶವಿನ್ಯಾಸ ಮಾಡಿಕೊಂಡರೆ ಇನ್ನು ಚೆನ್ನಾಗಿರುತ್ತದೆ. ಬ್ರೊಕೇಡ್, ವೆಲ್ವೆಟ್, ಸ್ಯಾಟಿನ್ ಮತ್ತು ರೇಷ್ಮೆಯಂತಹ ಬಟ್ಟೆಗಳಲ್ಲಿನ ಲೆಹಂಗಾಗಳು ಚಳಿಗಾಲಕ್ಕೆ ಹೆಚ್ಚು ಸೂಕ್ತ. ಕಾಟನ್ ಬಟ್ಟೆಗಳನ್ನು ಬೇಸಿಗೆಯಲ್ಲಿ ಧರಿಸಬಹುದು. ಮಕ್ಕಳಿಗೆ ಹಬ್ಬ, ಮದುವೆ ದಿನಗಳಲ್ಲಿ ಆರಾಮದಾಯಕ ಲೆಹಂಗಾ ಧರಿಸಿ.

## ಗಾಢಬಣ್ಣದ ಲೆಹಂಗಾ ಹಬ್ಬಕ್ಕೆ ಸೂಕ್ತ



ಬೇರೆ ಎಲ್ಲಾ ದಿನಗಳಲ್ಲಿ ಫ್ಯಾಷನಬಲ್ ಬಟ್ಟೆ ಧರಿಸಿದರೆ ಹಬ್ಬ ಹರಿದಿನಗಳು ಸಮಯದಲ್ಲಿ ಮನೆಯ ಹೆಣ್ಣುಮಕ್ಕಳು ಲೆಹಂಗಾ, ಹಾಫ್ ಸೀರೆಯನ್ನು ಹೆಚ್ಚು ಮೆಚ್ಚುತ್ತಾರೆ. ಇಂದು ನಾನಾ ತರಹದ ವಿನ್ಯಾಸಗಳು ಮಾರುಕಟ್ಟೆಯಲ್ಲಿವೆ. ಮಕ್ಕಳಿಗೆ ಆರಾಮದಾಯಕವಾದ ವಿನ್ಯಾಸಗಳನ್ನು ಆಯ್ಕೆ ಮಾಡಿಕೊಂಡು ಹಬ್ಬಗಳಿಗೆ ಬಳಸಿದರೆ ಉತ್ತಮ. ಅವರಿಗೆ ಆರಾಮದಾಯಕವಾಗಿ ಓಡಾಡಲು ಸುಲಭವಾಗುತ್ತದೆ.

ಎಲೈನ್ ಫ್ಲೇರಡ್ ಲೆಹಂಗಾ, ಕಾಲಿಯಾ ಹಾಗೂ ಪ್ಲಿಟ್ಸ್ ಸದ್ಯದ ಟ್ರೆಂಡ್. ಕಡಿಮೆ ಎಂಬ್ರಾಯ್ಡರಿ ವರ್ಕ್ ಇರುವ ಬ್ರೈಟ್ ಕಲರ್ ಲೆಹಂಗಾ ಹಬ್ಬಕ್ಕೆ ಹೆಚ್ಚು ಸೂಕ್ತ.

– ಸುಜಯ ಮಹೇಶ್, ವಿನ್ಯಾಸಕಿ